# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 2826/2020

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರತ್ನಮಾಲ | ಸಿಡಬ್ಲ್ಯೂ-10 |
| ತಂದೆಯ/ಗಂಡನ ಹೆಸರು | - | ಸಂತೋಷ್ ನಾಯ್ಕ | ಪಿಡಬ್ಲ್ಯೂ-11 |
| ವಯಸ್ಸು | - | ಸು. 41 ವರ್ಷ | ಪ್ರ.ವ.ಬೋ ದಿನಾಂಕಃ19.03.2025 |
| ಉದ್ಯೋಗ | - | ಕೇಸ್ ವರ್ಕರ್, ತಾಲ್ಲೂಕು ಪಂಚಾಯತ್, ಹಿರಿಯೂರು | |
| ವಾಸ | - | ಹಿರಿಯೂರು. | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

1. 2020-21 ನೇ ಸಾಲಿನಲ್ಲಿ ಐಮಂಗಲ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಹಿರಿಯೂರು ವೃತ್ತ ನಿರೀಕ್ಷಕರ ಮನವಿಯ ಆಧಾರದ ಮೇಲೆ ದಿಃ 27.11.2020 ರಂದು ಚಾಸಾ-1 ರವರು ವಾಸವಿದ್ದ ಬಾಡಿಗೆ ಮನೆಯ ಖಾತಾ ಉತಾರವನ್ನು ಅಬ್ಬಿನಹೊಳೆ ಪೋಲಿಸರಿಗೆ ನಿಪಿ-10 ರಂತೆ ನೀಡಿರುತ್ತೇನೆ. ಸಾಕ್ಷಿಯು ಖಾತಾ ಉತಾರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

**ಪಾಟೀ-ಸವಾಲುಃ ಆರೋಪಿ ಪರ ಶ್ರೀಮತಿ. ಹೆಚ್ ಬಿ ಆರ್ ವಕೀಲರಿಂದಃ**

1. ಅಬ್ಬಿನಹೊಳೆ ಪೋಲಿಸರು ನನಗೆ ಲಿಖಿತವಾಗಿ ಮನವಿಯನ್ನು ಸಲ್ಲಿಸಿರುತ್ತಾರೆ. ಕರಾಆಕರಣೆಯ ರಿಜಿಸ್ಟರ್ ನ್ನು ನೋಡಿ ನಿಪಿ-10 ರಂತೆ ಧೃಢೀಕರಣ ಪತ್ರವನ್ನು ನೀಡಿರುತ್ತೇನೆ. ನಿಪಿ-10 ರಲ್ಲಿ ನಮೂದಿಸಿದಂತೆ ಯಾವ ರೀತಿಯ ಕಟ್ಟಡ ಇದೆ ಎಂದು ನನಗೆ ಈಗ ನೆನಪಿಲ್ಲ. ಸ್ಥಳ ಪರಿಶೀಲನೆ ಮಾಡದೇ ನಿಪಿ-

10 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ–1 ಮತ್ತು ಡಿ.ಜಿ.ಹನುಮಂತಯ್ಯ ಅವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಚಾಸಾ–1 ರವರು ಡಿ.ಜಿ.ಹನುಮಂತಯ್ಯ ಅವರ ಮನೆಯಲ್ಲಿ ಬಾಡಿಗೆ ಇದ್ದರು ಎಂದು ನುಡಿಯುತ್ತಾರೆ. ಚಾಸಾ–1 ರವರೊಂದಿಗೆ ಶಾಮೀಲಾಗಿ ಸುಳ್ಳು ಧೃಢೀಕರಣ ಪತ್ರವನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.